7



# ಗೋಧ್ರೋತ್ತರ ಗಲಭೆಯ 13 ಅಪರಾಧಿಗಳಿಗೆ ಜಾಮೀನು

**ಹೊಸದಿಲ್ಲಿ:** ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಗೋಧ್ರೋತ್ತರ ಗಲಭೆ ಪ್ರಕರಣದ 17 ಅಪರಾಧಿಗಳ ಪೈಕಿ 13 ಮಂದಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ವಿಶೇಷವೆಂದರೆ, ಈ 13 ಮಂದಿಗೆ ಸಾಮಾಜಿಕ ಸೇವೆ ಹಾಗೂ ಆಧ್ಯಾತ್ಮಿಕ ಸೇವೆಗಳಲ್ಲಿ ತೊಡಗಿಸಿಕೊಳ್ಳುವಂತೆ ಸಿಜೆಐ ಎಸ್.ಎ. ಬೊಬ್ಡೆ ನೇತೃತ್ವದ ಪೀಠ ನಿರ್ದೇಶಿಸಿದೆ. ಯಾವುದೇ ಕಾರಣಕ್ಕೂ ಗುಜರಾತ್ ಪ್ರವೇಶಿಸುವಂತಿಲ್ಲ ಎಂದು ಷರತ್ತು ವಿಧಿಸಿದೆ.

## ಕೋರ್ಟ್ ಷರತ್ತು

- ಜಾಮೀನು ಪಡೆದ 13 ಅಪರಾಧಿಗಳು 2 ತಂಡಗಳಾಗಿ ವಿಂಗಡನೆ
- ಒಂದು ಗುಂಪು ಇಂದೋರ್‌ಗೆ ಸ್ಥಳಾಂತರ, ಮತ್ತೊಂದು ಜಬಲ್ಪುರಕ್ಕೆ
- ಸಾಮಾಜಿಕ ಸೇವೆ, ಆಧ್ಯಾತ್ಮಿಕ ಕಾರ್ಯಗಳಲ್ಲಿ ಮಾತ್ರ ತೊಡಗಿಕೊಳ್ಳಲು ಸೂಚನೆ
- ಯಾವ ಕಾರಣಕ್ಕೂ ಗುಜರಾತ್ ಪ್ರವೇಶಿಸಬಾರದು ಎಂದು ತಾಕೀತು

ಜಾಮೀನು ಅವಧಿಯಲ್ಲಿ ಅಪರಾಧಿಗಳು ಕೇವಲ ಸಾಮಾಜಿಕ ಕಾರ್ಯಗಳು ಹಾಗೂ ಆಧ್ಯಾತ್ಮಿಕ ಸೇವೆಯಲ್ಲಿ ಮಾತ್ರ ತೊಡಗಿಕೊಂಡಿರುವಂತೆ ನಿಗಾ ಇರಿಸಲು ಪೀಠ ಸೂಚಿಸಿದೆ. ಜತೆಗೆ ಅಪರಾಧಿಗಳಿಗೆ ನಿತ್ಯ ಜೀವನ ಸಾಗಿಸಲು ಅನುಕೂಲವಾಗುವ ನೌಕರಿ ಹುಡುಕಿ ಕೊಡಿಸುವಂತೆಯೂ ಕೋರ್ಟ್ ಮಧ್ಯಪ್ರದೇಶ ಆಡಳಿತಕ್ಕೆ ಸೂಚಿಸಿದೆ.



**ಏನಿದು ಪ್ರಕರಣ?:** ಗೋಧ್ರಾದಲ್ಲಿ ಸಬರಮತಿ ಎಕ್ಸ್‌ಪ್ರೆಸ್ ಬೋಗಿಗೆ ಬೆಂಕಿ ಹಚ್ಚಲಾದ ದುರ್ಘಟನೆ ಬಳಿಕ 2002ರ ಫೆಬ್ರವರಿಯಲ್ಲಿ ಮೆಹ್ಸಾನಾ ಜಿಲ್ಲೆಯ ಸರ್ದಾರ್‌ಪುರ ಗ್ರಾಮದಲ್ಲಿ 33 ಮುಸ್ಲಿಮರು ಹತ್ಯೆ ಮಾಡಲಾಗಿತ್ತು. ಸೂರತ್ ಬಳಿಯ ಈ ಗ್ರಾಮದಲ್ಲಿದ್ದ ಮನೆಯೊಂದಕ್ಕೆ ದುಷ್ಕರ್ಮಿಗಳ ಗುಂಪು ಬೆಂಕಿ ಹಚ್ಚಿ ಪ್ರತೀಕಾರಕ್ಕೆ ಯತ್ನಿಸಿತ್ತು. ಈ ಸಂಬಂಧ ಪೊಲೀಸರು 76 ಆರೋಪಿಗಳನ್ನು ಬಂಧಿಸಿದ್ದರು.

ಕೋರ್ಟ್ ವಿಚಾರಣೆ ವೇಳೆ ಇಬ್ಬರು ಮೃತಪಟ್ಟರು. 2011ರ ನ.9ರಂದು ಅಧೀನ ನ್ಯಾಯಾಲಯ ಸುದೀರ್ಘ ವಿಚಾರಣೆ ನಂತರ ಪ್ರಕರಣ 31 ಆರೋಪಿಗಳನ್ನು ದೋಷಿ ಎಂದು ಪರಿಗಣಿಸಿ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿತು. ಇತರ ಆರೋಪಿಗಳನ್ನು ಖುಲಾಸೆಗೊಳಿಸಿತು. 2016ರಲ್ಲಿ ಗುಜರಾತ್ ಹೈಕೋರ್ಟ್ 17 ಅಪರಾಧಿಗಳು ಸಲ್ಲಿಸಿದ್ದ ಮೇಲ್ಮನವಿಯನ್ನು ತಿರಸ್ಕರಿಸಿ ಜೀವಾವಧಿ ಶಿಕ್ಷೆಯನ್ನು ಎತ್ತಿ ಹಿಡಿಯಿತು. ಉಳಿದ 14 ಅಪರಾಧಿಗಳನ್ನು ಖುಲಾಸೆಗೊಳಿಸಿತು.